ಓ.ಎಸ್ಃ 10/2015

ಡಿ. ಡಬ್ಲ್ಯು ಃ 03

**<u>ಸಾಕ್ಷಿಗೆ ದಿನಾಂಕ 12.08.2024 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ವಾದಿ ಪರ ವಕೀಲರಿಂದ</u>**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿರುವ ಬಗ್ಗೆ ಯಾವುದೇ ಅಂಶಗಳು ತಿಳಿದಿರುವುದಿಲ್ಲ. ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನಗೆ ಮಾದಯ್ಯನ ಮಗ ಮಾದೇಗೌಡರ ಪರಿಚಯವಿರುವುದಿಲ್ಲ. ನಮ್ಮ ಊರಿನವರು ಆದರೆ ನನಗೆ ಪರಿಚಯವಿರುವುದಿಲ್ಲ. ನಾನು ನಮ್ಮ ಊರಿನವರು ಯಾರು ಎಲ್ಲಿದ್ದಾರೆ ಎಂಬ ಬಗ್ಗೆ ತಿಳಿದಿರುವುದಿಲ್ಲ. ಈ ದಾವೆಯ ವಾದಿ ಪ್ರತಿವಾದಿಗಳು ಯಾರು ಎಂದು ತಿಳಿದುಕೊಂಡಿರುತ್ತೇನೆ. ನಮ್ಮ ಸ್ವತ್ತಿಗೂ ದಾವ ಸ್ವತ್ತಿಗೂ ಸುಮಾರು 200 ಮೀಟರ್ ಅಂತರವಿರುತ್ತದೆ. ಸರ್ವೆ ನಂ. 218 ರಲ್ಲಿ ಒಟ್ಟು ವಿಸ್ತೀರ್ಣ ಎಷ್ಟು ಎಂಬ ಬಗ್ಗೆ ಹಾಗೂ ಯಾರು ಯಾರು ಎಷ್ಟು ಎಷ್ಟು ಸ್ವಾಧೀನದಲ್ಲಿದ್ದಾರೆ ಎಂಬ ಬಗ್ಗೆ ತಿಳಿದಿರುವುದಿಲ್ಲ. ಈ ದಿನ ನ್ಯಾ.ಕ್ಕೆ ಪ್ರತಿವಾದಿಗಳು ನನ್ನನ್ನು ಕರೆದುಕೊಂಡು ಬಂದಿರುವುದಿಲ್ಲ, ನ್ಯಾ.ದಿಂದ ನೋಟೀಸ್ ಬಂದಿರುವುದರಿಂದ ಹಾಜರಾಗಿರುತ್ತೇನೆ. ಮಾದಯ್ಯ ಬಿನ್ ಮಾದೇಗೌಡ ರವರು ಪ್ರತಿವಾದಿಗಳ ವಿರುದ್ಧ ಅಸಲು ದಾವೆ ಸಂಖ್ಯೆ 122/1986 ರಂತೆ ದಾವೆ ದಾಖಲಿಸಿದ್ದರು ಎಂದರೆ ಆ ಬಗ್ಗೆ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಸದರಿ ಹಣ ವಸೂಲಾತಿ ದಾವೆ ಸಂಬಂಧ ಹಣ ಪಾವತಿಸದೆ ಇದ್ದ ಕಾರಣ ಜಾರಿ ಸಂಖ್ಯೆ

134/1986 ರಂತೆ ಜಾರಿ ಅರ್ಜಿ ದಾಖಲಿಸಿದ್ದ ಬಗ್ಗೆ ನನಗೆ ತಿಳಿದಿರುವುದಿಲ್ಲ. ದಾವ ಸ್ವತ್ತು ದಿ. 18.06.1987 ರಲ್ಲಿ ವಾದಿಯ ಗಂಡ ಹುಚ್ಚೇಗೌಡ ದಾವ ಸ್ವತ್ತನ್ನು ಹರಾಜಿನ ಮೂಲಕ ಖರೀದಿಸಿರುತ್ತಾರೆ ಎಂದರೆ ಆ ಬಗ್ಗೆ ನನಗೆ ತಿಳಿದಿಲ್ಲ. ಪ್ರತಿವಾದಿಗಳು ನನ್ನ ಜೊತೆ ಚೆನ್ನಾಗಿರುವುದರಿಂದ ಅವರಿಗೆ ಅನುಕೂಲವಾಗಲಿ ಎಂದು, ವಾದಿಗಳು ಬೇರೆ ಊರಿನವರಾಗಿದ್ದರಿಂದ ಮೇಲ್ಕಂಡ 18.06.1987 ರ ಜಾರಿ ಅರ್ಜಿ ಆದೇಶದ ಮೂಲಕ ವಾದಿಯ ಗಂಡ ನಂತರ ವಾದಿ ದಾವ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುತ್ತಾರೆ, ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇಲ್ಲಿಯ ವರೆಗೂ ಸಹ ಪ್ರತಿವಾದಿ ಹೊನ್ನಮ್ಮ ರವರ ಹೆಸರಿನಲ್ಲಿ ಪಹಣಿ ನಮೂದು ಇರುತ್ತದೆ. ನಾನು ಸದರಿ ಪಹಣಿಯನ್ನು ನೋಡಿರುತ್ತೇನೆ. ದಾವ ಸ್ವತ್ತು ಸಿ.ಡಿ.ಎಸ್ ನಾಲಾ ನೀರಾವರಿಗೆ ಒಳಪಟ್ಟ ವಾರ್ಷಿಕ 2 ಫಸಲು ಬೆಳೆಯುತ್ತಾರೆ ಎಂದರೆ ಸರಿಯಲ್ಲ. ವಾರ್ಷಿಕ ಒಂದು ಫಸಲು ಬೆಳೆಯುತ್ತಾರೆ. ಸಾಕ್ಷಿಗೆ ವಾದಿ ಸ್ವಾಧೀನದಲ್ಲಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿ ಹೊನ್ನಮ್ಮ ರವರು ಸ್ವಾಧೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ. ವಾದಿ ಚಾಮಲಪುರ ವಾಸಿ ಎಂದರೆ ನನಗೆ ತಿಳಿದಿಲ್ಲ. ವಾದಿಗಳು ದಾವ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲದೆ ಇದ್ದರೂ ವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವಾದಿಯ ದಾವೆಯ ಬಗ್ಗೆ ಖುದ್ದು ಮಾಹಿತಿ ಇಲ್ಲದೆ ಇದ್ದರೂ ಪ್ರತಿವಾದಿಯ ಹೇಳಿಕೆ ಮೇಲೆ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ಈಗಲೂ ಸಹ ಭತ್ತ, ರಾಗಿ, ಕಬ್ಬು ಬೆಳೆದುಕೊಂಡು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ